Downloaded From : http://www.cbseportal.com



# CBSE-REGIONAL OFFICE, CHENNAI

## ANSWER KEY (MARKING SCHEME): AISSCE-2018

**CLASS : 12 SUBJECT: KANNADA –115 MARKS – 100**

## ವಿಭಾಗ – ಎ[ವ್ಯಾಕರಣ] : 25 ಅಂಕಗಳು

1. [ಅ] ಪ್ರಶ್ನಾರ್ಥಕ ವಾಕ್ಯ : ನಗರಪ್ರದೇಶಗಳಲ್ಲಿ ತ್ಯಾಜ್ಯವಸ್ತುಗಳ ನಿರ್ವಹಣೆ ಬಹುದೊಡ್ಡ ಸಮಸ್ಯೆಯಾಗಿದೆಯೇ? –> 1

[ಆ] ನಿಷೇಧಾರ್ಥಕ ರೂಪ : ನಮ್ಮ ದೇಶದಲ್ಲಿ ಇದು ಹೆಚ್ಚು ಮಹತ್ವ ಪಡೆದಿರುವುದಿಲ್ಲ –>1

[ಇ] ಸಾಮಾನ್ಯ ವಾಕ್ಯ ಪರಿವರ್ತನೆ: –>1

*ದೇಶದಲ್ಲಿ ಸರ್ಕಾರ ಕಟ್ಟುನಿಟ್ಟಿನ ಕ್ರಮಗಳನ್ನು ಅನುಸರಿಸಿತು.

*ಇದರಿಂದ ಭ್ರಷ್ಟಾಚಾರ ನಿರ್ಮೂಲನೆಯಾಯಿತು

[ಈ] ಭವಿಷತ್ಕಾಲದಲ್ಲಿ ಬರೆಯಿರಿ: ಗಾಂಧಿ ಜಯಂತಿಯನ್ನು ಅಕ್ಟೋಬರ್ ೨ ರಂದು ಆಚರಿಸಲಾಗುವುದು –> 1

[ಉ] ಕ್ರಿಯಾಪದ, ಧಾತು : ಸಾಧಿಸಿತು – ಸಾಧನೆ –> $^1/_2 + ^1/_2$ =1

2. ಕನ್ನಡಕ್ಕೆ ರೂಪಾಂತರ : –> 5

ರೂಪಾಂತರಶೈಲಿ, ಗದ್ಯದ ಮೂಲಾರ್ಥ ಮತ್ತು ಸಂಯೋಜನೆಯನ್ನು ಗಮನಿಸಿ ಅಂಕಗಳನ್ನು ನೀಡುವುದು.

3. ಪ್ರಸ್ತಾರ , ಗಣ ವಿಂಗಡಣೆ ಹಾಗೂ ಛಂದಸ್ಸಿನ ಹೆಸರು (ಎರಡಕ್ಕೆ) : –> $2^1/_2 + 2^1/_2 = 5$

[ಅ] ನುಡಿದು/ದನೆಯ್ದಿ/ ತುತ್ತತು/ದಿಯೆಯ್ದು/ವಿನಂ ನು/ಡಿದಂ ವ/ಲಂ ಚಲಂ

/ನ/ ಜ/ ಭ/ ಜ/ ಜ/ ಜ/ ರ/

UUU/U-U/-UU/U-U/U-U/U-U/-U-/ ಚಂಪಕಮಾಲಾ ವೃತ್ತ (ಅಕ್ಷರ ಗಣ)

[ಆ] ರಾಮುನಿನಗಲ್ಚಿ ತಂದಾ

ನೀ ಮಾನಿನಿಗಿನಿತು ದುಃಖಮಂ ಪುಟ್ಟಿಸಿದೆಂ

/- UU/U-U/ - -/ –> 4/4/4/=12

/- -/UUUU/U-U/- -/UU-/ –> 4/4/4/4/4=20 ಕಂದ ಪದ್ಯ (ಮಾತ್ರಾಗಣ)

[ಇ] ಎನಲು ಕಂಬನಿದುಂಬಿದನು ಕಡು

ನೆನೆದುದಂತಃಕರಣ ರೋಷದ

ಘನತೆ ಹೆಚ್ಚಿತು ಹಗೆಗಳನು ಹಿಂಡಿದನು ಮನದೊಳಗೆ

/UUU/-UU/-U/UUUU/ –> 3/4/3/4=14

/ UUU/- -/UUU/-UU/ –> 3/4/3/4=14

/ UUU/-UU/UUU/UU-/UUU/UUUU/-/ –> 3/4/3/4/3/4+2 = 23 ಭಾಮಿನೀ ಷಟ್ಪದಿ(ಮಾತ್ರಾಗಣ)

[ಈ] ಸೊಂಪಿನಿಂ ಕಂಪಿಡುವ ಸಂಪಗೆಗಳಂ ಕೊಂಡು

ಹೊಂಪೆಸೆವ ಹೊಂಗೇದಗೆಯ ಹೂಗಳಂ ಕೊಂಡು

/-U-/ -UUU/-UUU/- -U/ -> 5/5/5/5/=20

/ -UUU/- -U/UU-U/- -U/ -> 5/5/5/5/=20 ಲಲಿತ ರಗಳೆ (ಮಾತ್ರಾಗಣ)

4. ಗಾದೆ ಮಾತುಗಳ ವಿಸ್ತರಣೆ (ಬೇಕಾದ ಎರಡಕ್ಕೆ) : –> $2^1/_2 + 2^1/_2 = 5$

ಆರಂಭ + ಹೊರ ಅರ್ಥ+ಒಳ ಅರ್ಥ+ಅನ್ವಯ –>$^1/_2 + ^1/_2$ + ½ +1 = $2^1/_2$

5. ಸೂಚನೆಯಂತೆ ಬರೆಯುವ ಉತ್ತರಗಳು

[ಅ] ಸಮಾನಾರ್ಥಕ ಪದ i) ಉರಗ –ಸರ್ಪ, ಹಾವು –> $^1/_2$

ii)ಕಲಹ – ಜಗಳ, ಕಾಳಗ –> $^1/_2$

ಅಥವಾ

ನಾನಾರ್ಥಗಳು – ತಿಳಿ = ಅರಿತುಕೊಳ್ಳುವುದು, ಸ್ವಚ್ಛವಾಗು –> $^1/_2 + ^1/_2$

[ಆ] ಜೋಡು ನುಡಿಗಳ ಸ್ವಂತ ವಾಕ್ಯ ಪ್ರಯೋಗ –> 1+1=2

ವಾಕ್ಯದ ಅರ್ಥವನ್ನು ಗಮನಿಸಿ ಅಂಕ ನೀಡುವುದು.

Downloaded From : http://www.cbseportal.com Courtesy : CBSE

Downloaded From : http://www.cbseportal.com



ಅಥವಾ

ನುಡಿಗಟ್ಟುಗಳ ಸ್ವಂತ ವಾಕ್ಯ ಪ್ರಯೋಗ –>1+1=2

ವಾಕ್ಯದ ಅರ್ಥವನ್ನು ಗಮನಿಸಿ ಅಂಕ ನೀಡುವುದು.

[ಇ] ಬಿಡಿಸಿ ಬರೆಯುವುದು: –> 1+1=2

i) ಸುಲಿಯುವುದೊಂದೇ –> ಸುಲಿಯುವುದು + ಒಂದೇ ii) ಮಲ್ಲನೆದ್ದನು –> ಮಲ್ಲನು + ಎದ್ದನು

ಅಥವಾ

i) ಸಮತೆಯನ್ನು –> ಅನ್ನು – ದ್ವಿತೀಯಾ, ii) ಗದ್ಯದೊಳ್ –> ಒಳ್ – ಸಪ್ತಮೀ

## ವಿಭಾಗ–ಬಿ [ಅರ್ಥಗ್ರಹಿಕೆ] :10 ಅಂಕಗಳು

6. ಕೆಳಗಿನ ಗದ್ಯಭಾಗವನ್ನು ಓದಿ ಪ್ರಶ್ನೆಗಳಿಗೆ ಉತ್ತರಿಸಿ:

[ಅ] ತನ್ನೊಳಗೆ ಏನು ನಡೆಯುತ್ತಿದೆ ಎಂಬುದನ್ನು ಗಮನಿಸಿಕೊಳ್ಳುತ್ತಿದ್ದುದೇ ಟೆಸ್ಲಾನಿಗೆ ಖಿನ್ನತೆಯನ್ನು ಉಂಟುಮಾಡುತ್ತಿತ್ತು–> [1]

[ಆ] ಟೆಸ್ಲಾನ ಹೆಸರು ಜಗತ್ತಿಗೆ ತಿಳಿಯದಂತೆ ಮರೆಮಾಚಲಾಯಿತು, ಪಠ್ಯಪುಸ್ತಕಗಳಲ್ಲಿಯೂ ಅವನ ಸಾಧನೆಗಳಿಗೆ ಪ್ರಚಾರವಿಲ್ಲದಂತೆ ನೋಡಿಲೊಳ್ಳಲಾಯಿತು. ಅವನ ಬೃಹತ್ ಕನಸು ಅರ್ಧಕ್ಕೇ ನಿಂತಿತು. ಹೀಗಾಗಿ ದುಃಖಿಯಾಗಿ ಜೀವನದ ಅಂತ್ಯವನ್ನು ಕಳೆಯಬೇಕಾಯಿತು –> [2]

[ಇ] ಗೃಹೋಪಯೋಗಿ ವಸ್ತುಗಳ ಸಂಶೋಧನೆ –> [1]

[ಈ] ಕರಾಳ ರಾತ್ರಿಯಲ್ಲಿ ಜನಿಸಿದ್ದ ಮಗುವನ್ನು ಕಂಡ ಸೂಲಗಿತ್ತಿ, ಈತ ಕತ್ತಲೆಯಲ್ಲಿ ಜನಿಸಿದ್ದಾನೆ, ಈತನಿಂದ ಜಗತ್ತಿಗೆ ಕೆಡುಕಾಗುತ್ತದೆ ಅಂದಾಗ ಅದಕ್ಕೆ ಪ್ರತ್ಯುತ್ತರವಾಗಿ ಟೆಸ್ಲಾನ ತಾಯಿ ' ಇಲ್ಲ ಅವನು ಬೆಳಕಿನ ಕಂದ' ಎಂದು ಹೇಳಿದಳು –> [2]

7. ಪದ್ಯದ ಸಾರಾಂಶ : –> 4

ಪದ್ಯದ ಅರ್ಥ, ವಿವರಣೆ ಮತ್ತು ಸಾರಾಂಶಗಳ ಅಂಶಗಳನ್ನು ಗಮನಿಸಿ ಅಂಕಗಳನ್ನು ನೀಡುವುದು

## ವಿಭಾಗ– ಸಿ [ಬರೆವಣಿಗೆ] : 15 ಅಂಕಗಳು

8. ಅನುಭವ – ಬರವಣಿಗೆ : –> 5

ವಿಷಯ ಸಂಗ್ರಹ, ವಾಕ್ಯಸಂಯೋಜನೆ, ಅಭಿವ್ಯಕ್ತಿಗಳನ್ನು ಗಮನಿಸಿ ಅಂಕಗಳನ್ನು ನೀಡುವುದು.

9. ಪತ್ರಿಕಾ ಸಂಪಾದಕರಿಗೆ ಪತ್ರ: [5]

ಇಂದ ಮತ್ತು ಗೆ – ವಿಳಾಸ –> 1, ಒಡಲು –> 1, ವಿಷಯ ಸಂಯೋಜನೆ –> 2, ಮುಕ್ತಾಯ –>1,

10. ಗದ್ಯಭಾಗದ ಸಂಕ್ಷೇಪಣೆ : –> 5

ಗದ್ಯದ ಸಂಪೂರ್ಣ ಅರ್ಥ, ಶೀರ್ಷಿಕೆ, ವಾಕ್ಯಸಂಯೋಜನೆ, ಅಭಿವ್ಯಕ್ತಿಯನ್ನು ಗಮನಿಸಿ ಅಂಕಗಳನ್ನು ನೀಡುವುದು.

## ವಿಭಾಗ–ಡಿ[ಪಠ್ಯಗಳ ಅಧ್ಯಯನ] : 50 ಅಂಕಗಳು

### ಗದ್ಯಭಾಗ

11. ಒಂದು ವಾಕ್ಯದ ಉತ್ತರಗಳು : (ನಾಲ್ಕಕ್ಕೆ) ->1*4=4

[ಅ] ಎಡಗಣ್ಣಿನಲ್ಲಿ ನೋವು ಕಾಣಿಸಿಕೊಂಡಿತು.

[ಆ] ಅಗತ್ಯ ಮಾಹಿತಿಗಳನ್ನು ಕ್ರೋಢೀಕರಿಸಿದ ಸೂಕ್ಷ್ಮ ಎಲೆಕ್ಟ್ರಾನಿಕ್ ಸಾಧನವೇ ಚಿಪ್.

[ಇ] ವೃದ್ಧರಿಗೆ

[ಈ] ವಾತ್ಸಾಯನನಿಗೆ

[ಉ] ಡಾ/ ಸಿ.ಎನ್.ಆರ್ ರಾವ್

Downloaded From : http://www.cbseportal.com Courtesy : CBSE

Downloaded From : http://www.cbseportal.com



**12.** ಎರಡು–ಮೂರು ವಾಕ್ಯಗಳ ಉತ್ತರಗಳು : (ಎರಡಕ್ಕೆ) -> **2*2=4**

[ಅ] ನಿನ್ನ ಕಣ್ಣು ಸರಿ ಹೋಗುತ್ತೆ. ಆದರೆ ಆಪರೇಷನ್ ಆಗಬೇಕು, ಪರವಾಗಿಲ್ಲವಾ? ಎಂದು ಹೇಳಿದರು.

[ಆ] ಎಲ್ಲ ಸೂಚನೆಗಳು, ಎಲ್ಲಾ ಫಾರಂಗಳು, ಎಲ್ಲ ಬರವಣಿಗೆಯ ವ್ಯವಹಾರಗಳು ಕ್ರಮವಾಗಿ ಪ್ರಾದೇಶಿಕ ಭಾಷೆ, ಹಿಂದೀ ಮತ್ತು ಇಂಗ್ಲೀಷ್‌ಗಳಲ್ಲಿರಬೇಕೆಂಬುದೇ ತ್ರಿಭಾಷಾ ಸೂತ್ರದ ಬಳಕೆ.

[ಇ] ಮುದ್ದಣನು ಕಥೆಯನ್ನು ಸ್ವಸ್ತಿ ಶ್ರೀ. . . . ಎಂದು ಸಂಸ್ಕೃತ ಭಾಷೆಯಲ್ಲಿ ಹೇಳಲು ಆರಂಭಿಸಿದನು. ಮನೋರಮೆ ತಡೆದು 'ನನಗೆ ಸರಿಯಾಗಿ ಕನ್ನಡವೇ ತಿಳಿಯುವುದಿಲ್ಲ, ಅಂಥದರಲ್ಲಿ ಸಂಸ್ಕೃತದಲ್ಲಿ ಹೇಳಿದರೆ ಹೇಗೆ ತಿಳಿಯುವುದು? ಸಂಸ್ಕೃತದಲ್ಲಿ ಹೇಳಿದರೆ ನೀರಿಳಿಯದ ಗಂಟಲಲ್ಲಿ ಕಡುಬನ್ನು ತುರುಕಿದಂತಾಗುವದು. ಅರ್ಥೈಸಿಕೊಳ್ಳುವುದು ಕಷ್ಟ, ಅದಕ್ಕಾಗಿ ಹಿತಕರವಾದ ಕನ್ನಡದಲ್ಲಿಯೇ ಹೇಳಿರಿ ಎಂದಳು.

**13.** ಸಂದರ್ಭ, ಸ್ವಾರಸ್ಯ : [ಒಂದಕ್ಕೆ] –>**3*1=3**

[ಅ] "ಈ ಅದೃಷ್ಟ ನಿನಗೂ ಇತ್ತಲ್ಲೇ?"

ನೇಮಿಚಂದ್ರ ಬರೆದ 'ಆಯ್ಕೆಯಿದೆ ನಮ್ಮ ಕೈಯಲ್ಲಿ' ಎಂಬ ಗದ್ಯದಿಂದ ಮೇಲಿನ ವಾಕ್ಯವನ್ನು ಆರಿಸಿಕೊಳ್ಳಲಾಗಿದೆ. ಲೇಖಕಿಯರು ಗೆಳತಿ ಸೀತಾಳಿಗೆ ಹೇಳಿದ ಮಾತಿದು. ಲೇಖಕಿ ಸಂಶೋಧನೆಯನ್ನು ಮುಗಿಸಿ ಕೆಲಸಕ್ಕೆ ಸೇರಿದ ಸಂದರ್ಭದಲ್ಲಿ ಒಂದು ದಿನ ಸೀತಾ ಇವರ ಮನೆಗೆ ಬಂದು 'ನೀನು ಬಿಡೆ ತುಂಬಾ ಅದೃಷ್ಟವಂತೆ ಎಂದು ಹಲುಬಿದಾಗ ಈ ಮಾತನ್ನು ಸೀತೆಗೆ ಹೇಳಿದರು.

[ಆ] "ವಿಜ್ಞಾನದ ಅಡಿಪಾಯವೇ ಪ್ರಶ್ನೆ ಕೇಳುವುದು."

ಎಚ್.ಆರ್. ರಾಮಕೃಷ್ಣರಾವ್‌ರವರು ಬರೆದ 'ಬದುಕನ್ನು ಪ್ರೀತಿಸಿದ ಸಂತ' ಎಂಬ ಗದ್ಯದಿಂದ ಮೇಲಿನ ವಾಕ್ಯವನ್ನು ಆರಿಸಿಕೊಳ್ಳಲಾಗಿದೆ.

ಕಲಾಂರು ಚೆನ್ನೈನ ಪದ್ಮ ಶೇಷಾದ್ರಿ ಬಾಲಭವನದ ಪ್ರೌಢ ಶಾಲೆಯಲ್ಲಿ ನಡೆಸಿದ ಕಾರ್ಯಕ್ರಮವೊಂದರಲ್ಲಿ ವಿದ್ಯಾರ್ಥಿಯೊಬ್ಬ "ಭೂಮಿಯ ಮೇಲಿನ ಮೊದಲ ವಿಜ್ಞಾನಿ ಯಾರಾಗಿರಬಹುದು? ದಯವಿಟ್ಟು ಹೇಳಿ" ಎಂದಾಗ ಈ ಮಾತನ್ನು ಹೇಳಿದರು.

**14.** ಐದಾರು ವಾಕ್ಯಗಳ ಉತ್ತರಗಳು : [ಒಂದಕ್ಕೆ] –>**4*1=4**

[ಅ] ಪಶ್ಚಿಮ ಘಟ್ಟ ಶ್ರೇಣಿಯ ನಡುವಿನ ಒಂದು ದಟ್ಟ ಅರಣ್ಯ ಪ್ರದೇಶ. ಆ ಪ್ರದೇಶಕ್ಕೆ ಹೆಸರೇ ಇರಲಿಲ್ಲ. ಅನನ್ಯ ಜೀವ ಸಂಕುಲಗಳಿಂದ ಕೂಡಿದ ಅರಣ್ಯ ಸಮೃದ್ಧವಾಗಿತ್ತು. ದಟ್ಟವಾದ ಈ ಕಾಡಿನ ಬಗ್ಗೆ ಹೊರಗಿನವರಿಗೆ ಪರಿಚಯವಿರಲಿಲ್ಲ. ಹೊಸತನ್ನು ಶೋಧಿಸುವ, ಅನ್ವೇಷಿಸುವ ಪ್ರವೃತ್ತಿಯ ಬ್ರಿಟೀಷ್ ಪ್ರಜೆ ಕಾರ್ವೆರ್ ಮಾರ್ಷ್ 1890ರಲ್ಲಿ ಕುದುರೆ ಏರಿ ಕೊಯಮತ್ತೂರಿನಿಂದ 100 ಕಿ.ಮೀ. ದೂರದಲ್ಲಿರುವ ವಾಲ್‌ಪರೈಗೆ ಬಂದ. ದಟ್ಟವಾದ ಕಾಡಿನಲ್ಲಿ ದಾರಿ ತಪ್ಪಿದರೂ ಎದೆಗುಂದದೆ ಮುನ್ನಡೆದ. ಕಾಲುದಾರಿಯೊಂದು ಕಂಡಿತು. ಅದನ್ನು ಹಿಡಿದು ಮುನ್ನಡೆದಾಗ ನಾಲ್ಕಾರು ಆದಿವಾಸಿಗಳ ಗುಡಿಸಲುಗಳು ಕಂಡವು. ಈತನ ವಿಚಿತ್ರವಾದ ವೇಷ ಮತ್ತು ಕುದುರೆಯನ್ನು ಕಂಡ ಆದಿವಾಸಿಗಳು ಹೆದರಿ ಮಕ್ಕಳೊಂದಿಗೆ ಅಡವಿಯೊಳಗೆ ಮಾಯವಾದರು. ಧೈರ್ಯಸ್ಥನಾದ ಆದಿವಾಸಿ ಪೂಣಚ್ಚಿಯೊಂದಿಗೆ ಸಂಜ್ಞೆಗಳ ಮೂಲಕ ಸ್ನೇಹ ಸಂಪಾದಿಸಿದ. ಅವನ ಸಹಾಯದಿಂದ ಕಾಡನ್ನೆಲ್ಲ ಅನ್ವೇಷಿಸಿದ. ಆದಿವಾಸಿಗಳ ವಿಶ್ವಾಸ ಗಳಿಸಿ, ಅವರ ಸಹಕಾರ ಪಡೆದು ಅಲ್ಲಿಯೇ ನೆಲೆ ನಿಲ್ಲಲು ತೀರ್ಮಾನಿಸಿದ. ಆಗ ತಾನೇ ಭಾರತಕ್ಕೆ ಬಂದಿದ್ದ ಚಹಾಗಿಡಗಳನ್ನು ನೆಟ್ಟ. ಜಾಗ ಹೊಸದಾಗಿದ್ದರಿಂದ ಅವು ಹುಲುಸಾಗಿ ಬೆಳೆದವು. ಮಾರ್ಷ್ ನಿಧಾನವಾಗಿ ಕಾಡನ್ನು ಕಡಿಯುತ್ತ ಚಹಾಗಿಡಗಳನ್ನು ಬೆಳೆಸುತ್ತ ಬಂದನು. ಸಮೃದ್ಧವಾಗಿ ಬೆಳೆದ ತೋಟವನ್ನು ನೋಡಿ ಆನಂದಿಸುತ್ತ 1934 ರಲ್ಲಿ ಅಸು ನೀಗಿದನು.

[ಆ] ಕುದುಪ ಮತ್ತು ಚೆನ್ನಮ್ಮ ಅವರ ಮಗ ಗುಡ್ಡ ಧಣಿಗಳ ತೋಟದಲ್ಲಿ ವಾಸವಾಗಿದ್ದ ಬಡ ಕುಟುಂಬ. ಹೋಳೆಯೊಂದಿಗೆ ಬಹಳ ಅನನ್ಯ ಸಂಬಂಧ ಹೊಂದಿದ್ದ ಕುಟುಂಬ. ಚೆನ್ನಮ್ಮನ ಪುಟ್ಟ ಸಂಸಾರದ ಬಗ್ಗೆ ಹೊಳೆಗೆ ಪ್ರೀತಿ–ವಾತ್ಸಲ್ಯ ಮತ್ತು ವಿಶೇಷ ಕಾಳಜಿ. ಕುಟುಂಬದೊಂದಿಗೆ ಒಡನಾಟ ಹೊಂದಿದ ಹೊಳೆ ಆ ಕುಟುಂಬದ ಮೇಲೆ ಅಪವಾದ ಬರುವಂತೆ ಮಾಡಿತು. ಶ್ರಾವಣ ಮಾಸದ ನಾಲ್ಕನೆಯ ದಿನ ಚೆನ್ನಮ್ಮನ ಕುಟುಂಬದ ಮೇಲೆ ಬೆಳ್ಳಿಯ ಲೋಟವನ್ನು ಲಪಟಾಯಿಸಿದ್ದಾರೆ ಎಂಬ ದೊಡ್ಡ ಬರುವಂತೆ ಮಾಡಿತು. ಈ ಕಾರಣದಿಂದಲೇ ಚೆನ್ನಮ್ಮನ ಕುಟುಂಬಕ್ಕೆ ಹೊಳೆಯ ಬಗ್ಗೆ ಅಸಹನೆ, ಕೋಪ ಉಂಟಾಯಿತು.

# ಪದ್ಯಭಾಗ

**15.** ಒಂದು ವಾಕ್ಯದ ಉತ್ತರಗಳು : (ನಾಲ್ಕಕ್ಕೆ) ->**1*4=4**

[ಅ] ಗುರುವು ಲಘುವರ್ತನದಲ್ಲಿ ವರ್ತಿಸಬಾರದೆಂದು ಉರಿಲಿಂಗಪೆದ್ದಿ ಅಭಿಪ್ರಾಯಪಡುತ್ತಾನೆ.

[ಆ] ಬ್ಯಾಸಗಿ ದಿವಸಕ್ಕೆ ಬೇವಿನ ಮರ ತಂಪು.

[ಇ] ಮಗುವಿನ ತಂದೆ ರಜಾ ದಿನಗಳಲ್ಲಿ ಕುಳಿತು ಕೆಮ್ಮುವ ಪ್ರಾಣಿ.

[ಈ] ದಲಿತವಾಸದ ಸೋಗೆ ಬಿಲಗಳು ತಿಂಗಳಿಗೊಂದು ಸಲವೂ ದೀಪ ಹಚ್ಚದ ಸ್ಥಳಗಳಾಗಿವೆ.

[ಉ] ಎಣ್ಣೆ ತೀರಿರುವ ದೀಪಗಳಿಗೆ ಬತ್ತಿ ಹೊಸೆಯುವ ಕೆಲಸ ವ್ಯರ್ಥವಲ್ಲದ ಕೆಲಸ ಎಂದು ಪ್ರೊ.ಟಿ.ಯೆಲ್ಲಪ್ಪ ಅಭಿಪ್ರಾಯಪಡುತ್ತಾರೆ?

Downloaded From : http://www.cbseportal.com Courtesy : CBSE

Downloaded From : http://www.cbseportal.com

CBSE PORTAL
www.cbseportal.com



**16.** ಎರಡು-ಮೂರು ವಾಕ್ಯಗಳ ಉತ್ತರಗಳು [ಎರಡಕ್ಕೆ] -> **2*2=4**

[ಅ] ರಾವಣನ ಆಗಮನದ ಸುದ್ದಿ ತಿಳಿದ ಸೀತೆಯು, ರಾಮ-ಲಕ್ಷ್ಮಣರಿಗೆ ಸಂಬಂಧಿಸಿದಂತೆ ಇನ್ನೇನು ಕೆಟ್ಟವಾರ್ತೆಯನ್ನು ಕೇಳಬೇಕಾಗಿದೆಯೋ ಎಂದು ತಲ್ಲಣಗೊಂಡಳು.

[ಆ] ನಿರ್ಮಲವಾದ ಶುಚಿತ್ವ ಗುಣವೇ ಮನುಷ್ಯನಿಗೆ ಮುಖ್ಯ. ಕಹಿಗುಣವೆಂದೂ ಸಿಹಿಯ ಸ್ವಾದವನ್ನು ಹೊಂದುವುದಿಲ್ಲವೆಂಬ ಅಭಿಪ್ರಾಯ [ಇ] ಕವಯಿತ್ರಿ ನಗುವ ನಗು ಕೊನೆಯಿಲ್ಲದ ನಗು. ಮೊನೆಯಿಲ್ಲದ ನಗು, ಆಕಾಶದಲ್ಲಿ ಕಾರ್ಮೋಡ ಕವಿಸುವ ನಗು, ಹೊಳೆ ಹರಿಸುವ ಬೆಳೆ

ಬೆಳೆಸುವ ನಗು. ದನ-ಜನ ಎಲ್ಲರೂ ಕೂಡಿ ನಗುವ ನಗು.

**17.** ಸಂದರ್ಭ, ಸ್ವಾರಸ್ಯ : [ಒಂದಕ್ಕೆ] ->**3*1=3**

[ಅ] "ನಾರುವ ದುರ್ಗಂಧ ಬಿಡಬಲ್ಲುದೆ?"

ಪುರಂದರದಾಸರು ರಚಿಸಿರುವ 'ಜಾಲಿಯ ಮರದಂತೆ' ಎಂಬ ಕೀರ್ತನೆಯಿಂದ ಈ ಮೇಲಿನ ವಾಕ್ಯವನ್ನು ಆರಿಸಲಾಗಿದೆ. ದುರ್ಜನರಿಗೆ ಮಾನ್ಯತೆ ನೀಡುವುದು ವ್ಯರ್ಥವೆಂಬುದನ್ನು ವಿವರಿಸುವಾಗ ಕವಿಯು ಈ ಮೇಲಿನ ವಾಕ್ಯವನ್ನು ಹೇಳಿದ್ದಾರೆ. ಊರಿನ ಹೊಲಸಿನಲ್ಲಿ ಜೀವಿಸುವ ಹಂದಿಯನ್ನು ತಂದು, ಅದಕ್ಕೆ ಷಡ್ರಾಸನ್ನ ಭೋಜನ ಮಾಡಿಸಿದ ಮಾತ್ರಕ್ಕೆ ಅದು ತನ್ನ ಮೈಯಿಂದ ದುರ್ಗಂಧ ಬೀರುವುದನ್ನು ಬಿಡುವುದಿಲ್ಲ. ಇದರಂತೆಯೇ ಸದಾ ದುಷ್ಟ ಕೆಲಸದಲ್ಲಿ ಮುಳುಗಿರುವ ದುರ್ಜನರಿಗೆ ತತ್ತ್ವೋಪದೇಶಗಳನ್ನು ಹೇಳಿದರೆ ಅವರ ಸ್ವಭಾವ ಬದಲಾಯಿಸುವುದಿಲ್ಲ. ಆದ್ದರಿಂದ ಕವಿಯು ಹಂದಿ ಮತ್ತು ದುರ್ಜನರ ಮೂಲಸ್ವಭಾವವನ್ನು ಬದಲಾಯಿಸಲು ಪ್ರಯತ್ನಿಸುವುದು ವ್ಯರ್ಥವಾದ ಕೆಲಸ ಎಂದಿದ್ದಾರೆ.

[ಆ] 'ತುಂಬಿರುವ ತನಕ ತುಂತುಂಬಿ ಕುಡಿಯಬೇಕು.'

ಅಂಬಿಕಾತನಯದತ್ತ ಕಾವ್ಯನಾಮದ ವರಕವಿ ದ.ರಾ.ಬೇಂದ್ರೆ ಅವರು ರಚಿಸಿರುವ 'ಬೆಳಗು ಜಾವ' ಕವಿತೆಯಿಂದ ಈ ಮೇಲಿನ ವಾಕ್ಯವನ್ನು ಸ್ವೀಕರಿಸಲಾಗಿದೆ.

ಮಲಗಿ ಹುಸಿನಿದ್ದೆಗೈಯುತ್ತಿರುವ ಯುವ ಮನಸ್ಸುಗಳನ್ನು ಎಚ್ಚರಿಸಿದ ಕವಿಯು 'ಈ ತುಂಬಿ ಬಾಳು' ಎಂದರೆ ದುಂಬಿಯಂತೆ ಅಲ್ಲಿಂದಿಲ್ಲಿಗೆ ಹಾರುವ ಜೀವನದ ಮಜಲಿಗೆ ಹೋಲಿಸಿ, ಅದನ್ನು ಸಿಕ್ಕಾಗ ಸಿಕ್ಕಷ್ಟನ್ನು ತುಂಬಿತುಂಬಿ ಕುಡಿಯುವಂತೆ ಬುದ್ಧಿಮಾತು ಹೇಳಿದ್ದಾರೆ. ನಾಳೆ ಹೇಗೋ ಏನೋ ಎಂಬುದು ಯಾರಿಗೂ ಅರಿವಿರದು. ಇರುವಾಗ ಕೈಗೆ ಸಿಕ್ಕಷ್ಟನ್ನು ಮೊಗೆಮೊಗೆದು ಅನುಭವಿಸಿ, ಬದುಕನ್ನು ಸಾರ್ಥಕಪಡಿಸಿಕೊಳ್ಳಬೇಕೆಂಬ ಸಂದೇಶವನ್ನು ಕವಿಯು ಈ ಮೇಲಿನ ವಾಕ್ಯದಲ್ಲಿ ಕಾಣಿಸಿದ್ದಾರೆ.

**18.** ಐದಾರು ವಾಕ್ಯಗಳ ಉತ್ತರಗಳು [ಒಂದಕ್ಕೆ] -> **4*1=4**

[ಅ] ತನಗಾದ ಅವಮಾನವನ್ನು ದ್ರೌಪದಿ ಭೀಮನಿಗೆ ಹೇಳಿಕೊಂಡ ಬಗೆಯನ್ನು ವಿವರಿಸಿ.

ಮಲಗಿದ್ದ ಭೀಮನನ್ನು ಎಬ್ಬಿಸಿದ ದ್ರೌಪದಿಯು ಅವನೊಂದಿಗೆ ತನಗಾದ ಅವಮಾನವನ್ನು ಕುರಿತು ಹೇಳುತ್ತಾಳೆ. ಕೀಚಕನು ರಾಜಸಭೆಯಲ್ಲಿ ಭೀಮನೆದುರಲ್ಲೇ ತನ್ನನ್ನು ಎಡಗಾಲಿನಿಂದ ಒದ್ದು ಬೀಳಿಸಿದ್ದನ್ನು ನೆನಪಿಸಿ, ನಿನಗೆ ಇದು ಸಹ್ಯವೇ? ಎಂದು ಪ್ರಶ್ನಿಸುತ್ತಾಳೆ. ಕೀಚಕ ತನ್ನ ಬೆನ್ನು ಹತ್ತದೆ ಬಿಡುವವನಲ್ಲನಾದ್ದರಿಂದ ತಾನಿನ್ನು ಬದುಕುವುದಿಲ್ಲವೆಂದು ಕಣ್ಣೀರಿಡುತ್ತಾಳೆ. ಉಳಿದ ಪಾಂಡವರು ತನ್ನೊಂದಿಗೆ ರಮಿಸಲು ಮಾತ್ರ ಮುಂದೆ ಬರುತ್ತಾರೆ. ಮಾನಾರ್ಥವೆನ್ನಲು ಕಾಲ್ತೆಗೆಯುತ್ತಾರೆ. ಅವರು ಗಂಡರೆನಿಸಲು ಅಯೋಗ್ಯರು. ಆದ್ದರಿಂದ ನೀನು ಕೀಚಕನನ್ನು ಯಮಲೋಕಕ್ಕಟ್ಟಿ ತನ್ನನ್ನು ಕಾಯಬೇಕೆಂದು ಕೈಮುಗಿದು ಬೇಡಿಕೊಳ್ಳುತ್ತಾಳೆ. ಭೀಮನು ಪ್ರೋತ್ಸಾಹದ ಸಂತೈಕೆಯ ಮಾತುಗಳನ್ನಾಡದಿದ್ದಾಗ ಅವನ ಪೌರುಷವನ್ನು ತನ್ನ ರೋಷದ ಮೂದಲಿಕೆಯ ಮಾತುಗಳಿಂದ ಕೆಣಕುತ್ತಾಳೆ. ಮೂರು ಲೋಕದ ವೀರರಾದ ನಿಮ್ಮಿಂದ ಹೆಂಡತಿಯೊಬ್ಬಳನ್ನು ಆಳಲಾಗದೆಂದು ಹೀಯಾಳಿಸುತ್ತಾಳೆ. ದುಶ್ಶಾಸನ-ಸೈಂಧವ-ಕೀಚಕರಿಂದ ತನಗಾದ ಅವಮಾನವನ್ನು ನೆನಪಿಸಿ, ತನ್ನಂತಹ ದು:ಖಿಗಳು ಇನ್ನಾರೂ ಇಲ್ಲವೆಂದು ಗೋಳಾಡುತ್ತಾಳೆ. ಅಂತಿಮವಾಗಿ ಕೀಚಕನನ್ನು ಕೊಲ್ಲುವ ಕೆಲಸಕ್ಕೆ ಭೀಮನನ್ನು ಪ್ರೇರೇಪಿಸುವಲ್ಲಿ ಸಫಲಳಾಗುತ್ತಾಳೆ.

[ಆ] ವೃದ್ಧರ ತವಕ ತಲ್ಲಣಗಳನ್ನು ಕವಯಿತ್ರಿ ಹೇಗೆ ಚಿತ್ರಿಸಿದ್ದಾರೆ?

ಲಲಿತಾ ಸಿದ್ಧಬಸವಯ್ಯ ಅವರ 'ಒಂದು ಹೂ ಹೆಚ್ಚಿಗೆ ಇಡುತೀನಿ' ಎಂಬ ಕವಿತೆಯು ವೃದ್ಧರ ತವಕ ತಲ್ಲಣಗಳನ್ನು ಹಿಡಿದಿಟ್ಟಿದೆ. ಎಷ್ಟೋ ವರ್ಷಗಳಿಂದ ಒಬ್ಬರಿಗೊಬ್ಬರು ಆಸರೆಯಾಗಿ ಬಾಳಿದ ವಯೋವೃದ್ಧ ತಂದೆ-ತಾಯಿಗಳನ್ನು ಜವಾಬ್ದಾರಿಯನ್ನು ನಿರ್ವಹಿಸುವ ನೆಪದಲ್ಲಿ ಮಕ್ಕಳಿಬ್ಬರೂ ಬೇರ್ಪಡಿಸುವ ಸಂದರ್ಭವನ್ನು ಪ್ರಸ್ತುತ ಕವಿತೆಯಲ್ಲಿ ಕಾಣುತ್ತೇವೆ. ಇಳಿ ವಯಸ್ಸಿನಲ್ಲಿ ದೂರಾಗಿ ಒಂದು ಫೋನಿನ ಕರೆಗಾಗಿ ತಳಮಳಿಸುವ ಹಿರಿಯ ಜೀವಗಳೆರಡರ ತವಕ-ತಲ್ಲಣಗಳನ್ನು ಕವಯಿತ್ರಿ ಹಿಡಿದಿಟ್ಟಿದ್ದಾರೆ. ವಯೋವೃದ್ಧರನ್ನು ಅನಾದರದಿಂದ ಕಾಣುವ ಕೌಟುಂಬಿಕ ವ್ಯವಸ್ಥೆಯ ಬಗ್ಗೆ ಈ ಕವಿತೆ ವಿಷಾದದ ದನಿ ಎತ್ತಿದೆ ಎನ್ನಬಹುದು. ನಮ್ಮನ್ನು ಪ್ರೀತಿಯಿಂದ ಪೋಷಿಸಿದ ಹಿರಿಯರನ್ನು ಅವರ ವೃದ್ಧಾಪ್ಯದಲ್ಲಿ ಆಸರೆಗೋಲಾಗದ ನಮ್ಮ ಹೊಣೆಗೇಡಿತನವನ್ನು ಕವಿತೆ ಪ್ರಶ್ನಿಸುವಂತಿದೆ.

Downloaded From : http://www.cbseportal.com Courtesy : CBSE

Downloaded From : http://www.cbseportal.com



# ದೀರ್ಘ ಗದ್ಯ

**19.** ಒಂದು ವಾಕ್ಯದ ಉತ್ತರಗಳು: [ಮೂರಕ್ಕೆ] –>**1*3=3**

[ಅ] ಆನೆಯ ಮಾವುತನ ಹೆಸರು ವೇಲಾಯುಧ.

[ಆ] ಟೆಲಿಫೋನ್ ಕಂಬದ ಮೇಲೆ ಮೃತನಾದ ಲೈನ್‌ಮನ್ ತಿಪ್ಪಣ್ಣ

[ಇ] ರೇಂಜರ್ ಆನೆಗೆ ಶೂಟ್ ಮಾಡುವಂತೆ ಫಾರೆಸ್ಟರ್ ನಾಗರಾಜನಿಗೆ ಸೂಚಿಸಿದರು.

[ಈ] ದುರ್ಗಪ್ಪನ ಪ್ರಕಾರ ತರ್ಲೆ ಡಿಪಾರ್ಟಮೆಂಟ್ ಟೆಲಿಫೋನ್ ಡಿಪಾರ್ಟಮೆಂಟ್.

**20.** ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ [ಒಂದಕ್ಕೆ] –> **2*1=2**

[ಅ] ಭದ್ರಾ ಅಣೆಕಟ್ಟಿನಿಂದ ಮುಳುಗಡೆಯಾಗುವ ಕಾಡುಗಳನ್ನು ಸರ್ವೇ ಮಾಡಲು ಬಂದಿದ್ದ ಪ್ರಕಾಶ್ ಮೂಡಿಗೆರೆಯಲ್ಲಿ ಒಂದು ಭಾಷಣ ಮಾಡುತ್ತ ಕಾಡಾನೆಗಳು ಊರಿನ ಕಡೆ ಬಂದು ಜನರ ಪೈರು ಫಸಲಿಗೆ ಹಾನಿ ಮಾಡಲು ಕಾರಣ ಅರಣ್ಯ ಇಲಾಖೆಯವರು ಕಾಡಿನ ಮರಗಳನ್ನು ಕಡಿದು ನೀಲಗಿರಿ, ಅಕೇಶಿಯಾ ಮುಂತಾದ ಆನೆಗಳಿಗೆ ನಿರುಪಯುಕ್ತವಾದ ಮರಗಳನ್ನು ನೆಡುತ್ತಿರುವುದು ಕಾರಣ ಎಂದು ಹೇಳಿದರು.

[ಆ] ರಾಮಪ್ಪ, "ನಾಗರಾಜ ಗಂಗಾಧರನ ಗ್ಯಾಂಗಿನ ಕಾರನ್ನು ನಿಲ್ಲಿಸಿ ಒಳಗೇನಿದೆ ಚೆಕ್ ಮಾಡಲು ಇಣುಕಿ ನೋಡಿದನಂತೆ. ಒಳಗಿದ್ದ ಕೇಡಿಯೊಬ್ಬ ನಾಗರಾಜನ ತಲೆಯನ್ನು ಹೊರಗೆಳೆದುಕೊಳ್ಳದಂತೆ ಜುಟ್ಟು ಹಿಡಿದು ಕಾರಿನ ಗಾಜನ್ನು ಏರಿಸಿ ಕುತ್ತಿಗೆ ಸಿಗಿಸಿದನಂತೆ. ಕಿಟಕಿಯಲ್ಲಿ ಕುತ್ತಿಗೆ ಸಿಕ್ಕಿಕೊಂಡು ವಿಲವಿಲ ಒದ್ದಾಡುತ್ತಿದ್ದ ನಾಗರಾಜನ ಸಮೇತ ಕಾರು ಚಾರ್ಮಡಿ ಕಡೆಗೆ ಓಡಿತೆಂದು" ಹೇಳಿದನು.

**21.** ಸಂದರ್ಭ, ಸ್ವಾರಸ್ಯ : [ಒಂದಕ್ಕೆ] –>**3*1=3**

[ಅ] ಹೌದಾ ಎಲ್ಲಿ ಕಚ್ಚಿತೋ ಜಬ್ಬಾರ್?

ತೇಜಸ್ವಿಯವರು ಬರೆದಿರುವ 'ಕೃಷ್ಣೇಗೌಡನ ಆನೆ' ಎಂಬ ನೀಳ್ಗತೆಯಿಂದ ಈ ಮೇಲಿನ ವಾಕ್ಯವನ್ನು ಸ್ವೀಕರಿಸಲಾಗಿದೆ. ಊರಿನಲ್ಲಿ ಕಂತ್ರಿನಾಯಿಗಳ ಕಾಟ ಹೆಚ್ಚಾಗಿರುವುದಕ್ಕೆ ಮುನ್ಸಿಪಾಲಿಟಿಯವರ ಬೇಜವಾಬ್ದಾರಿತನವೇ ಕಾರಣವೆಂದು ವೆಟರ್ನರಿ ಸ್ಟಾಕ್‌ಮನ್ ಪುಟ್ಟಯ್ಯ ನಿರೂಪಕರ ಬಳಿ ದೂರಿದನು. ಆಗ ನಿರೂಪಕರು ನಿಮ್ಮ ಡಾಕ್ಟರ್ಗೆ ಹೇಳಿ ಮುನ್ಸಿಪಾಲಿಟಿ ಪ್ರೆಸಿಡೆಂಟರಿಗೆ ಒಂದು ಕಂಪ್ಲೇಂಟ್ ಕೊಡಿಸಬೇಕೆಂದೂ, ಜಬ್ಬಾರನಿಗೂ ನಾಯಿ ಕಚ್ಚಿದೆಯೆಂದೂ ತಿಳಿಸಿದಾಗ ಪುಟ್ಟಯ್ಯ ಜಬ್ಬಾರನಿಗೆ "ಹೌದಾ ಎಲ್ಲಿ ಕಚ್ಚಿತೋ ಜಬ್ಬಾರ್?" ಎಂದು ಪ್ರಶ್ನಿಸಿರುವ ಸಂದರ್ಭವಿದಾಗಿದೆ.

[ಆ] ನಮ್ಮ ಕಡೆ ಕೆಮ್ಮು ಕಾಲಿಂಗ್ ಬೆಲ್ ಇದ್ದ ಹಾಗೆ.

ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರ 'ಕೃಷ್ಣೇಗೌಡನ ಆನೆ' ಕಥೆಯ ಮೊದಲ ಅಧ್ಯಾಯದ ಆರಂಭದಲ್ಲಿ ಬರುವ ವಾಕ್ಯವಿದು. ನಿರೂಪಕರು ಜೀಪಿನ ಅಡಿ ಮಲಗಿ ರಿಪೇರಿ ಕೆಲಸದಲ್ಲಿ ತೊಡಗಿರುವಾಗ ಅಲ್ಲಿಗೆ ಬಂದ ಎಲೆಕ್ಟ್ರಿಕ್ ಲೈನ್ ಮನ್ ದುರ್ಗಪ್ಪ ನಿರೂಪಕರ ಗಮನ ಸೆಳೆಯಲು ಒಂದೆರಡು ಭಾರಿ ಕೆಮ್ಮಿದನು. ಆ ಸಂದರ್ಭದಲ್ಲಿ ನಿರೂಪಕರು ಈ ಮೇಲಿನ ಮಾತನ್ನು ಆಡಿದ್ದಾರೆ. ಮನೆ ಬಳಿ ಯಾರೂ ಕಣ್ಣಿಗೆ ಬೀಳದಿದ್ದಾಗ ಅಲ್ಲಿಗೆ ಬಂದವರು ಕೆಮ್ಮಿ ಕ್ಯಾಕರಿಸಿ ಗಲಾಟೆ ಮಾಡಿ ಮನೆಯವರ ಗಮನ ಸೆಳೆಯಲು ಪ್ರಯತ್ನಿಸುವುದನ್ನು ನಿರೂಪಕರು "ನಮ್ಮ ಕಡೆ ಕೆಮ್ಮು ಕಾಲಿಂಗ್ ಬೆಲ್ ಇದ್ದಹಾಗೆ" ಎಂದು ವಿವರಿಸಿದ್ದಾರೆ.

**22.** ಐದಾರು ವಾಕ್ಯಗಳಲ್ಲಿ ಉತ್ತರಿಸಿ [ಒಂದಕ್ಕೆ] –> **4*1=4**

[ಅ] ಜಬ್ಬಾರ್ ಹೆಸರಿಗಷ್ಟೇ ಕೇಂದ್ರ ಸರ್ಕಾರದ ನೌಕರನಾಗಿದ್ದ. ಕಳೆದ ಹದಿನಾರು ವರ್ಷಗಳಿಂದ ಕೆಲಸ ಮಾಡುತ್ತಿದ್ದರೂ ಇನ್ನೂ ಟೆಂಪರ್ವರಿಯಾಗೇ ಉಳಿದಿದ್ದ. ಅವನ ಸಂಬಳವಾದರೂ ಕೇವಲ ಅರವತ್ತು ರೂಪಾಯಿಗಳು ಮಾತ್ರ. ಆ ಸಂಬಳದಲ್ಲಿ ಹೊಟ್ಟೆ ಹೊರೆಯಲಾಗದೆ ನೂರೆಂಟು ಪತ್ರಿಕೆಗಳ ಏಜೆನ್ಸಿ ಪಡೆದು, ತಾನು ಪೋಸ್ಟ್ ವಿತರಿಸುವೆಡೆಯಲೆಲ್ಲಾ ಚಂದಾದಾರರನ್ನು ಗಳಿಸಲು ಯತ್ನಿಸುತ್ತಿದ್ದ. ದಿನಾ ಪತ್ರಿಕೆಗಳ ಕಂತೆಯನ್ನು ತನ್ನ ಸೆಕೆಂಡ್ ಹ್ಯಾಂಡ್ ಲೂನಾದ ಮೇಲೆ ಹೇರಿಕೊಂಡು ಹದಿನೆಂಟು ಕಿಲೋಮೀಟರ್ ಸಂಚರಿಸಬೇಕಿತ್ತು. ಹ್ಯಾಂಡಪೋಸ್ಟ್, ಬಿದಿರಳ್ಳಿ ಮುಂತಾದ ಕಡೆ ನೇತುಹಾಕಿದ್ದ ಬಾಕ್ಸ್‌ಗಳಿಂದ ಪೋಸ್ಟ್ ಕ್ಲಿಯರ್ ಮಾಡಿ ತರಬೇಕಿತ್ತು. ಅವನು ಪೋಸ್ಟ್ ಕೊಡಲು ಹೋದಲ್ಲೆಲ್ಲಾ ವರ್ಷಕ್ಕೆ ಒಂದು ನಾಯಿಂದಲಾದರೂ ಕಚ್ಚಿಸಿಕೊಳ್ಳುತ್ತಿದ್ದ.

Downloaded From : http://www.cbseportal.com Courtesy : CBSE

Downloaded From : http://www.cbseportal.com



[ಆ] ಕೃಷ್ಣೇಗೌಡನ ಆನೆಯು ಬಲಭೀಮನಾಗಿದ್ದರೂ 'ಬಾಯಿ' ಯಿಲ್ಲದ ಕಾರಣ ಪಾಪದ ಪ್ರಾಣಿಯಾಗಿದೆ. ಅಲ್ಲದೆ ಸಮಾಜದಲ್ಲಿ ಬಾಯಿಯಿಲ್ಲದೆ ಬದುಕುವ ಅಸಹಾಯಕ ಜನರ ಸಂಕೇತವೆಂಬಂತೆ ಚಿತ್ರಿತವಾಗಿದೆ. ಆನೆಯ ಮೇಲೆ ಬಂದ ಆಪಾದನೆಗಳು ಹಲವು. ಆದರೆ ಯಾವುದಕ್ಕೂ ಆನೆ ನೇರವಾಗಿ ಕಾರಣವಾಗಿರುವುದಿಲ್ಲ. ಅದಿರುವುದು ಮನುಷ್ಯನ ನಿಯಂತ್ರಣದಲ್ಲಿ. ಆದರೂ ಜನ ತಮ್ಮ ಮನಸ್ಸಿಗೆ ತೋಚಿದ್ದನ್ನು ಆನೆಯ ಮೇಲೆ ಹೊರಿಸುತ್ತಾ ಅದನ್ನು ಅಪರಾಧಿಯನ್ನಾಗಿಸುತ್ತಾರೆ. ಪ್ರತಿಯೊಬ್ಬನೂ ಆನೆಗೊಂದು ವ್ಯಕ್ತಿತ್ವವನ್ನು ಆರೋಪಿಸಿ, ತನಗೆ ಕಂಡಂತೆ ಅರ್ಥೈಸುತ್ತಾನೆ. ಎಲ್ಲ ಪಾಪಕೃತ್ಯಗಳ ಅಪರಾಧವನ್ನು ಹೊತ್ತ ಆನೆ 'ಬಾಯಿಯಿಲ್ಲದ' ಎಲ್ಲರಿಗೂ, ಎಲ್ಲದಕ್ಕೂ ಸಂಕೇತವೆಂಬಂತೆ ಚಿತ್ರಿತವಾಗಿದೆ. ಮಾನವನ ಸ್ವಾರ್ಥಮೂಲ ನೆಲೆಯಿಂದ ಉತ್ಪನ್ನವಾದ ಬಲವಂತದಲ್ಲಿ ತನ್ನ ಮೂಲ ಸಹಜ ಸ್ವಭಾವವನ್ನು ಬಿಟ್ಟುಕೊಟ್ಟಿರುವ ಆನೆಯು ತನಗಾಗಿ ಅಲ್ಲದೆ, ಪರರ ಇಚ್ಛೆಯ ನಿಯಂತ್ರಣದಲ್ಲಿ ಬದುಕುತ್ತದೆ. ಸಮಾಜದಲ್ಲಿ ದನಿಯೆತ್ತಲಾರದ ಬಡವರ ಸ್ಥಿತಿ ಕೂಡ ಇದಕ್ಕೆ ಭಿನ್ನವಾಗಿಲ್ಲ.

## ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತ್ರೆ [ಕವಿ, ಕೃತಿ ಹಿನ್ನೆಲೆಯಲ್ಲಿ]

**23.** ಇಬ್ಬರು– ಕವಿ– ಕೃತಿ ಪರಿಚಯ: –> 4*2=08

[ಅ] ಕುಮಾರವ್ಯಾಸ: ಮೂಲ ಹೆಸರು: ನಾರಾಣಪ್ಪ ಊರು: ಗದಗ ಜಿಲ್ಲೆಯ ಕೋಳಿವಾಡ ಕಾಲ: ಕ್ರಿ.ಶ.೧೪೦೦ ವೃತ್ತಿ: ಕರಣಿಕ/ಶ್ಯಾನುಭೋಗಿಕೆ. ಕೃತಿ: ಕರ್ಣಾಟಭಾರತ ಕಥಾಮಂಜರಿ. ಬಿರುದು: ರೂಪಕ ಸಾಮ್ರಾಜ್ಯ ಚಕ್ರವರ್ತಿ, ಯುಗಪ್ರವರ್ತಕ. ವ್ಯಾಸರ ಮೇಲಿನ ಗೌರವದಿಂದ ತನ್ನ ಹೆಸರನ್ನು ಕುಮಾರವ್ಯಾಸ ಎಂದು ಇಟ್ಟುಕೊಂಡ.
ಕುಮಾರವ್ಯಾಸನು ಭಾಗವತ ಭಕ್ತಕವಿ. ಪಂಡಿತ ಮತ್ತು ಪಾಮರರಿಬ್ಬರಿಗೂ ಅರ್ಥವಾಗುವಂತೆ ಕೃತಿಯನ್ನು ರಚಿಸಿದ [ಕಲಿಯುದವರಿಗೂ ಕಾಮಧೇನು] ವ್ಯಾಸರ ಪ್ರಭಾವ ಇವನ ಮೇಲಿದೆ. ಆದರೂ ದೇಸಿ ಸೊಗಡನ್ನು ಕಾಣಬಹುದು. ವೀರನಾರಾಯಣ ಗುಡಿಯಲ್ಲಿ ಕಾವ್ಯ ರಚನೆ ಮಾಡುತ್ತಿದ್ದ. ಈತನ ವಿನಯ [ವೀರನಾರಾಯಣನೇ ಕವಿ, ಲಿಪಿಕಾರ ಕುವರವ್ಯಾಸ] ಭಾಮಿನಿ ಷಟ್ಪದಿಯಲ್ಲಿ ರಚಿತವಾದ ಹಾಡುಗಬ್ಬ. ಗಮಕ ಕಲೆಯ ಮೂಲಕ ಹಾಡುತ್ತಾರೆ.

[ಆ] ಪಿ.ಲಂಕೇಶ್: ತಂದೆ ನಂದಿ ಬಸಪ್ಪ, ತಾಯಿ ದೇವೀರಮ್ಮ. ಊರು: ಶಿವಮೊಗ್ಗ ಜಿಲ್ಲೆಯ ಹೊನ್ನಾಳಿ ತಾಲ್ಲೂಕಿನ ಕೊನಗನಹಳ್ಳಿ. ಕಾಲ: ೦೮–೩–೧೯೩೫ ರಿಂದ ೨೫–೧–೨೦೦೦. ವಿದ್ಯಾಭ್ಯಾಸ: ಮಾಧ್ಯಮಿಕದವರೆಗೆ ಕೊನಗನಹಳ್ಳಿ, ಪ್ರೌಢಶಾಲೆ, ಇಂಟರ್ ಶಿವಮೊಗ್ಗದಲ್ಲಿ, ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎ.[ಆನರ್ಸ], ಮೈಸೂರಿನಲ್ಲಿ ಎಂ.ಎ. ಇಂಗ್ಲೀಷ್ ಪದವಿ. ವೃತ್ತಿ: ಶಿವಮೊಗ್ಗದ ಸಹ್ಯಾದ್ರಿ ಕಾಲೇಜು, ಬೆಂಗಳೂರಿನ ಸೆಂಟ್ರಲ್ ಕಾಲೇಜು, ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕ ವೃತ್ತಿ ೧೯೫೯ ರಿಂದ ೧೯೭೮ ವರೆಗೆ ಅಧ್ಯಾಪಕ ವೃತ್ತಿ. ಸ್ವಯಂ ನಿವೃತ್ತಿ ಪಡೆದು 'ಲಂಕೇಶ್ ಪತ್ರಿಕೆ' ಆರಂಭ. ಕಥಾ ಸಾಹಿತ್ಯ ಪ್ರಕಾರಕ್ಕೆ ಶ್ರೇಷ್ಟ ಕೊಡುಗೆ. ಕಥಾಸಂಕಲನಗಳು: ಕೆರೆಯ ನೀರನು ಕೆರೆಗೆ ಚೆಲ್ಲಿ, ಕಲ್ಲು ಕರಗುವ ಸಮಯ, ನಾನಲ್ಲ, ಉಮಾಪತಿಯ ಸ್ಕಾಲರ್ ಶಿಪ್ ಯಾತ್ರೆ, ಉಲ್ಲಂಘನೆ, ಮಂಜು ಕವಿದ ಸಂಜೆ. ಕಾದಂಬರಿಗಳು: ಬಿರುಕು, ಮುಸ್ಸಂಜೆಯ ಕಥಾಪ್ರಸಂಗ, ಅಕ್ಕ. ನಾಟಕಗಳು: ಬಿರುಕು, ಸಂಕ್ರಾಂತಿ, ತೆರೆಗಳು, ಈಡಿಪಸ್ ಮತ್ತು ಅಂತಿಗೊನೆ, ಗುಣಮುಖ, ಟಿ.ಪ್ರಸನ್ನನ ಗೃಹಸ್ಥಾಶ್ರಮ, ನನ್ನ ತಂಗಿಗೊಂದು ಗಂಡು ಕೊಡಿ, ಕ್ರಾಂತಿ ಬಂತು ಕ್ರಾಂತಿ. ಕವನ ಸಂಕಲನಗಳು: ಬಿಚ್ಚು, ಚಿತ್ರ ಸಮೂಹ, ನೀಲು ಕಾವ್ಯ ಸಂಗ್ರಹ ೧,೨,೩ ಅಕ್ಷರ ಹೊಸ ಕಾವ್ಯ, ಪಾಪದ ಹೂಗಳು. ಅಂಕಣ ಬರೆಹಗಳ ಸಂಗ್ರಹ: ಟೀಕೆ ಟಿಪ್ಪಣಿ ೧,೨,೩ ಮರೆಯುವ ಮುನ್ನ ಸಂಗ್ರಹ ೧,೨,೩ ಮನಕೆ ಕಾರಂಜಿಯ ಸ್ಪರ್ಶ, ಈ ನರಕ ಈ ಪುಲಕ, ಆಟ–ಜೂಜು–ಮೋಜು, ಸಾಹಿತಿ ಸಾಹಿತ್ಯ ವಿಮರ್ಶೆ, ರೂಪಕ ಲೇಖಕರು, ಕಂಡದ್ದು ಕಂಡ ಹಾಗೆ. ಪ್ರಸ್ತುತ, ಪಾಂಚಾಲಿ. ಆತ್ಮಕಥೆ: ಹುಳಿ ಮಾವಿನ ಮರ.

ಪ್ರಶಸ್ತಿ ಪುರಸ್ಕಾರ: ಅಂಕಣ ಬರೆಹಗಳ ಸಂಗ್ರಹ 'ಕಲ್ಲು ಕರಗುವ ಸಮಯ' ಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ರಾಜ್ಯ ನಾಟಕ ಅಕಾಡೆಮಿ ಪ್ರಶಸ್ತಿ, ಆರ್ಯಭಟ ಸಾಹಿತ್ಯ ಪ್ರಶಸ್ತಿ. ಪ್ರಭಾವಿತರು: ಪೂರ್ಣಚಂದ್ರ ತೇಜಸ್ವಿ, ರವಿ ಬೆಳಗೆರೆ, ತ್ಯಾಗಿ, ಜೋಗಿ ಹಲವಾರು ಪತ್ರಕರ್ತರು.

[ಇ] ದ.ರಾ.ಬೇಂದ್ರೆ: ದತ್ತಾತ್ರೇಯ ರಾಮಚಂದ್ರ ಬೇಂದ್ರೆ ಕಾವ್ಯನಾಮ ಅಂಬಿಕಾತನಯದತ್ತ ಊರು ಧಾರವಾಡದ ಪೋತ್ನಿಸ್ ಗಲ್ಲಿಯಲ್ಲಿ ಮರಾಠಿ ಮಾತನಾಡುವ ಚಿತ್ಪಾವನ ಕುಟುಂಬದಲ್ಲಿ ಜನನ. ತಂದೆ ರಾಮಚಂದ್ರ ಬೇಂದ್ರೆ ತಾಯಿ ಅಂಬವ್ವ, ಕಾಲ: ೩೧–೦೧–೧೮೯೬ ರಿಂದ ೨೬–೧೦–೧೯೮೧. ಪತ್ನಿ ಲಕ್ಷ್ಮೀಬಾಯಿ. ತನ್ನ ೧೨ನೆಯ ವಯಸ್ಸಿನಲ್ಲಿ ತಂದೆಯನ್ನು ಕಳಕೊಂಡರು. ತಾಯಿ, ಅಜ್ಜಿಯರಿಂದ ಸಾಕಲ್ಪಟ್ಟರು. ವಿದ್ಯಾಭ್ಯಾಸ: ಧಾರವಾಡದ ವಿಕ್ಟೋರಿಯ ಹೈಸ್ಕೂಲು, ಪುಣೆಯ ಫರ್ಗ್ಯುಸನ್ ಕಾಲೇಜಿನಲ್ಲಿ ಬಿ.ಎ. ವೃತ್ತಿ: ಧಾರವಾಡದ ವಿಕ್ಟೋರಿಯ ಹೈಸ್ಕೂಲಿನಲ್ಲಿ ಅಧ್ಯಾಪಕರಾದರು. ಗದುಗಿನಲ್ಲಿ ಶಾಲಾ ಮುಖ್ಯೋಪಾಧ್ಯಾಯರಾದರು. ಪುಣೆಯ ಕಾಮರ್ಸ ಕಾಲೇಜಿನಲ್ಲಿ ಅಧ್ಯಾಪಕರಾದರು. ಸೊಲ್ಲಾಪುರದ ಡಿ.ಎ.ವಿ. ಕಾಲೇಜಿನಲ್ಲಿ ಪ್ರಾಧ್ಯಾಪಕರಾದರು. ೧೯೫೬ರಲ್ಲಿ ನೌಕರಿಯಿಂದ ನಿವೃತ್ತರಾದರು. ಧಾರವಾಡದಲ್ಲಿ 'ಗೆಳೆಯರ ಬಳಗ' ಆರಂಭಿಸಿದರು. ಕವನ ಸಂಕಲನ: ಕೃಷ್ಣಾ ಕುಮಾರಿ, ಗರಿ, [ಭಾವಗೀತೆಯ ಹೊಸ ಅಲೆಗೆ ಕಾರಣವಾಯಿತು] ಗರಿ ಸಂಗ್ರಹದಲ್ಲಿ ಪ್ರಕಟವಾದ 'ನರಬಲಿ' ಕವನ ಸರ್ಕಾರದ ವಿರುದ್ಧ ಬರೆದುದೆಂದು ಪರಿಗಣಿಸಿ ಮೂರು ತಿಂಗಳಕಾಲ ಹಿಂಡಲಗಿಯಲ್ಲಿ ಸೆರೆವಾಸ ಅನುಭವಿಸಿದರು. ನಂತರ ಎಂ.ಎ. ಪದವಿ ಪಾಸು ಮಾಡಿದರು. ಮೂರ್ತಿ ಮತ್ತು ಕಾಮಕಸ್ತೂರಿ, ನಾದಲೀಲೆ, ಉಯ್ಯಾಲೆ, ಸಖೀಗೀತ ಗಂಗಾವತರಣ, ಕನ್ನಡ ಮೇಘದೂತ, ಸೂರ್ಯಪಾನ, ಹೃದಯ ಸಮುದ್ರ, ಮುಕ್ತಕಂಠ, ಜೀವನಹರಿ, ಚೈತ್ಯಾಲಯ, ಅರಳು–ಮರಳು ಕೃತಿ, ನಮನ, ಸಂಚಯ, ಉತ್ತರಾಯಣ, ಮುಗಿಲಮಲ್ಲಿಗೆ, ಯಕ್ಷಯಕ್ಷಿ, ನಾಕುತಂತಿ, ಮರ್ಯಾದೆ, ಶ್ರೀಮಾತಾ, ಬಾ ಹತ್ತರ, ಇದು ನಭೋವಾಣಿ, ವಿನಯ, ಮತ್ತೆ ಶ್ರಾವಣ ಬಂತು

Downloaded From : http://www.cbseportal.com Courtesy : CBSE

Downloaded From : http://www.cbseportal.com



ವಿಮರ್ಶಾಗ್ರಂಥ: ಸಾಹಿತ್ಯ ಮತ್ತು ವಿಮರ್ಶೆ, ಜೈಮಿನಿ ಭಾರತಕ್ಕೆ ಮುನ್ನುಡಿ, ಕಾವ್ಯೋದ್ಯೋಗ, ಕನ್ನಡ ಸಾಹಿತ್ಯದಲ್ಲಿ ನಾಲ್ಕು ರತ್ನಗಳು, ಸಾಹಿತ್ಯದ ವಿರಾಟ್ ಸ್ವರೂಪ

ಕಥೆ ಹರಟೆಗಳ ಸಂಕಲನ: ನಿರಾಭರಣ ಸುಂದರಿ, ಅನುವಾದ ಸಾಹಿತ್ಯಕ್ಕೂ ಅಪಾರ ಕೊಡುಗೆ ನೀಡಿದ್ದಾರೆ. ಮರಾಠಿಯಲ್ಲಿಯೂ ಕೃತಿ ರಚನೆ ಮಾಡಿದ್ದಾರೆ.

ಪ್ರಶಸ್ತಿ: ಅರಳು-ಮರಳು ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ, ಮಹಾರಾಷ್ಟ್ರದ ಕೇಳ್ಕರ್ ಪ್ರಶಸ್ತಿ, ರಾಜ್ಯಸರ್ಕಾರದಿಂದ ಮಾಸಾಶನ, ಹೈದರಾಬಾದಿನ ಹಿಂದೀ ಪ್ರಚಾರ ಸಭಾದವರು ಸಾಹಿತ್ಯ ಆಚಾರ್ಯ ಪದವಿ, ಮೈಸೂರು, ಕರ್ನಾಟಕ ಮತ್ತು ಕಾಶಿ ವಿಶ್ವವಿದ್ಯಾಲಯಗಳಿಂದ ಗೌರವ ಡಾಕ್ಟರೇಟ್, ಕೇಂದ್ರ ಸರ್ಕಾರ ಪದ್ಮಶ್ರೀ ಪ್ರಶಸ್ತಿ, ೧೯೪೩ರಲ್ಲಿ ಶಿವಮೊಗ್ಗದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ, ೧೯೭೩ರಲ್ಲಿ ನಾಕುತಂತಿ ಕವನಸಂಗ್ರಹಕ್ಕೆ ಭಾರತೀಯ ಜ್ಞಾನಪೀಠ ಪ್ರಶಸ್ತಿ. ಬಿರುದು: ವರಕವಿ, ದಾರ್ಶನಿಕ ಕವಿ

[ಈ] ನೇಮಿಚಂದ್ರ: [ಲೇಖಕಿ]: ಜನನ: ೧೬-೭-೧೯೫೯. ಊರು: ಚಿತ್ರದುರ್ಗ, ತಂದೆ ಪ್ರೊ.ಜಿ.ಗುಂಡಣ್ಣ, ತಾಯಿ ತಿಮ್ಮಕ್ಕ. ವಿದ್ಯಾಭ್ಯಾಸ: ಪ್ರಾರಂಭಿಕ ಶಿಕ್ಷಣ ತುಮಕೂರು ನಂತರ ಮೈಸೂರಿನ ಎನ.ಐ.ಇ. ನಲ್ಲಿ ಬಿ.ಇ. ಪದವಿ, ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ನಿಂದ ಎಂ.ಎಸ್.ಪದವಿ.

ವೃತ್ತಿ: ಎಚ್.ಎ.ಎಲ್. ನಲ್ಲಿ ತಂತ್ರಜ್ಞ ಅಧಿಕಾರಿ

ಸಾಹಿತ್ಯ: ಕಾದಂಬರಿ ಯಾದ್ ವಶೇಮ್ ಕಥಾಸಂಕಲನ: ನಮ್ಮ ಕನಸುಗಳಲ್ಲಿ ನೀವಿದ್ದೀರಿ, ಮತ್ತೆ ಬರೆದ ಕಥೆಗಳು, ಕಳೆಯ ಬೇಕಿದೆ ನಿನ್ನ ಜೊತೆಯಲಿ ಒಂದು ಶ್ಯಾಮಲ ಸಂಜೆ, ನೇಮಿಚಂದ್ರರ ಕಥೆಗಳು

ಜೀವನ ಚರಿತ್ರೆ: ಬೆಳಗೆರೆ ಜಾನಕಮ್ಮ ಬದುಕು-ಬರೆಹ, ನೋವಿಗದ್ದಿದ ಕುಂಚ[ವ್ಯಾನ್ ಗೋ ಜೀವನ ಚಿತ್ರ], ಬೆಳಕಿಗೊಂದು ಕಿರಣ ಮೇರಿ ಕ್ಯೂರಿ, ಥಾಮಸ್ ಅಲ್ವಾ ಎಡಿಸನ್, ಡಾ. ಈಡಾ ಸ್ಕಡರ್, ನೊಬೆಲ್ ಪ್ರಶಸ್ತಿ ವಿಜೇತ ಮಹಿಳಾ ವಿಜ್ಞಾನಿಗಳು, ನನ್ನ ಕಥೆ... ನಮ್ಮ ಕಥೆ, ಕಾಲು ಹಾದಿಯ ಕೋಲ್ಮಿಂಚುಗಳು, ಮಹಿಳಾ ವಿಜ್ಞಾನಿಗಳು, ಹೋರಾಟದ ಹಾದಿಯಲ್ಲಿ ಧೀಮಂತ ಮಹಿಳೆಯರು.

ಪ್ರವಾಸ ಕಥನ: ಒಂದು ಕನಸಿನ ಪಯಣ, ಪೆರುವಿನ ಪವಿತ್ರ ಕಣಿವೆಯಲ್ಲಿ

ಇತರೆ: ಸಾಹಿತ್ಯ ಮತ್ತು ವಿಜ್ಞಾನ, ಬದುಕು ಬದಲಿಸಬಹುದು[ಅಂಕಣ ಬರೆಹ], ದುಡಿವ ಹಾದಿಯಲಿ ಜೊತೆಯಾಗಿ, ಮಹಿಳಾ ಅಧ್ಯಯನ, ಎಲೆಕ್ಟ್ರಾನಿಕ್ಸ್ ಮತ್ತು ಕಂಪ್ಯೂಟರ್ಸ, ನಿಮ್ಮ ಮನೆಗೊಂದು ಕಂಪ್ಯೂಟರ್, ಮಹಿಳಾ ಲೋಕ[ಸಂಪಾದಿತ], ನ್ಯಾಯಕ್ಕಾಗಿ ಕಾದ ಭಾಂವ್ರಿ ದೇವಿ[ಹೇಮಲತಾ ಮಹಿಷಿ ಅವರೊಡನೆ]

ಪ್ರಶಸ್ತಿ: ಬೆಳಕಿನೊಂದು ಕಿರಣ ಮೇರಿ ಕ್ಯೂರಿ, ಪೆರುವಿನ ಪವಿತ್ರ ಕಣಿವೆಯಲ್ಲಿ ಪುಸ್ತಕಗಳಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪುರಸ್ಕಾರ, ಯಾದ್ ವಶೇಮ್ ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ, ಶ್ರೀಮತಿ ಗಂಗಮ್ಮ ಸೋಮಪ್ಪ ಬೊಮ್ಮಾಯಿ ಪ್ರತಿಷ್ಠಾನದ 'ಅಕ್ಕ' ಪ್ರಶಸ್ತಿ, ಮತ್ತೆ ಬರೆದ ಕಥೆಗಳು ಕಥಾಸಂಕಲನಕ್ಕೆ ಆರ್ಯಭಟ ಪ್ರಶಸ್ತಿ, ವಿಜ್ಞಾನ ಸಾಹಿತ್ಯ ಮತ್ತು ಮಹಿಳಾ ಅಧ್ಯಯನ ಕೃತಿಗಳಿಗೆ 'ಸಂದೇಶ ಪ್ರಶಸ್ತಿ' ದೊರೆತಿದೆ, ಒಂದು ಕನಸಿನ ಪಯಣ ಕೃತಿಗೆ ಮಾತೋಶ್ರೀ ರತ್ನಮ್ಮ ಹೆಗ್ಗಡೆ ಪ್ರಶಸ್ತಿ, ಒಟ್ಟು ಸಾಹಿತ್ಯಕ್ಕೆ ಅತ್ತಿಮಬ್ಬೆ ಪ್ರಶಸ್ತಿ ದೊರೆತಿದೆ[೨೦೧೫]

*****************************

Downloaded From : http://www.cbseportal.com Courtesy : CBSE